2000ನೇ ಇಸವಿಯ ಹೊತ್ತಿಗೆ ಚೆನ್ನೈನಲ್ಲಿ 10 ಮತ್ತು ಕಾಂಚಿಪುರಂನಲ್ಲಿ ಒಂದು ಶರವಣ ಭವನ ಶಾಖೆ ಆರಂಭವಾಗಿತ್ತು. ದುಬೈನಲ್ಲಿ ಮೊದಲ ವಿದೇಶಿ ಶಾಖೆ ಆರಂಭಿಸಿದರು. ಚೆನ್ನೈನಲ್ಲಿ 'ಊಟ ತಯಾರಿದೆ' ಫಲಕಗಳ ಮೂಲಕ ಮನೆಮಾತಾದ ಶರವಣ ಭವನದ 48ನೇ ಶಾಖೆ ಸಿಂಗಪುರದಲ್ಲಿ ಆರಂಭವಾಯಿತು.

## ಕಾರ್ಮಿಕ ಸ್ನೇಹಿ ಉದ್ಯಮಿ

ಗುಣಮಟ್ಟ ಮತ್ತು ಬೆಲೆಯ ಕಡೆಗೆ ಗಮನ ನೀಡಿದ ರಾಜಗೋಪಾಲ್, ಪ್ಲೇಟ್ ಮೇಲೆ ಬಾಳೆಎಲೆ ಹಾಕಿ ತಿಂಡಿ, ಊಟ ಕೊಡುವ ಪರಿಪಾಠ ಆರಂಭಿಸಿದರು. ಈ ಪ್ರಯೋಗದಿಂದ ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆದಂತೆ ಆಯಿತು. ಒಂದೆಡೆ ಮತ್ತೊಬ್ಬರು ತಿಂದುಬಿಟ್ಟ ಪ್ಲೇಟ್‌ಗಳಲ್ಲಿ ತಿನ್ನುತ್ತಿದ್ದೇವೆ ಎನ್ನುವ ಗ್ರಾಹಕರ ಇರಿಸುಮುರಿಸು ನಿವಾರಣೆಯಾಯಿತು. ಮತ್ತೊಂದೆಡೆ ಪ್ಲೇಟ್ ತೊಳೆಯಲು ಬೇಕಿದ್ದ ನೀರು ಮತ್ತು ಕಾರ್ಮಿಕರ ಶ್ರಮ, ಸಮಯದಲ್ಲಿ ಉಳಿತಾಯವಾಯಿತು.

ಹೋಟೆಲ್‌ನಲ್ಲಿ ಕೆಲಸ ಮಾಡುವ ಎಲ್ಲ ಉದ್ಯೋಗಿಗಳಿಗೆ ಉಚಿತ ಹೇರ್‌ಕಟ್ ಸೌಲಭ್ಯ ಕಲ್ಪಿಸಿದ ನಂತರ ಸರ್ವರ್‌ಗಳು ಲಕ್ಷಣವಾಗಿ ಕಾಣಿಸುತ್ತಿದ್ದರು. ಎಲ್ಲ ನೌಕರರು ಉತ್ತಮ ಬಟ್ಟೆ ಹಾಕಬೇಕು, ಡ್ಯೂಟಿ ಮೇಲಿದ್ದಾಗ ನೀಟ್ ಆಗಿರಬೇಕು, ತಡರಾತ್ರಿ ಷೋಗಳಲ್ಲಿ ಸಿನಿಮಾ ನೋಡಬಾರದು ಎನ್ನುವ ನಿಯಮಗಳು ಶರವಣ ಭವನದಲ್ಲಿತ್ತು. ರಾತ್ರಿ ನಿದ್ದೆಗೆಟ್ಟು ಸಿನಿಮಾ ನೋಡಿದವರು ಮಾರನೇ ದಿನ ಗಮನಕೊಟ್ಟು ಕೆಲಸ ಮಾಡುವುದಿಲ್ಲ ಎನ್ನುವುದು ರಾಜಗೋಪಾಲ್ ತರ್ಕ.





ನೌಕರರಿಗೆ ಉಚಿತ ವಸತಿ ಸೌಲಭ್ಯದೊಂದಿಗೆ ಆ ಕಾಲಕ್ಕೆ ಅತ್ಯುತ್ತಮ ಎನ್ನುವಂಥ ವೇತನ, ಹಳ್ಳಿಗಳಲ್ಲಿ ಕುಟುಂಬ ಬಿಟ್ಟು ಬಂದ ನೌಕರರಿಗೆ ವರ್ಷಕ್ಕೊಮ್ಮೆ ಊರಿಗೆ ಹೋಗಲು ವಿಶೇಷ ರಜೆ, ವಿಶೇಷ ಭತ್ಯೆ, ವಿವಾಹಿತ ನೌಕರರ ಇಬ್ಬರು ಮಕ್ಕಳ ಶಿಕ್ಷಣಕ್ಕೆ ಸಹಾಯ, ಯಾವುದೇ ನೌಕರ ಕಾಯಿಲೆಯಿಂದ ಬಳಲಿದರೆ – ಆರೈಕೆಗೆ ಸಿಬ್ಬಂದಿಯನ್ನು ಕಳಿಸಿಕೊಡುವ ವ್ಯವಸ್ಥೆ... ಹೀಗೆ ಶರವಣ ಭವನದ ನೌಕರಸ್ನೇಹಿ ವಾತಾವರಣವೂ ಜನರ ಗಮನ ಸೆಳೆದಿತ್ತು. ರಾಜಗೋಪಾಲ್‌ರನ್ನು ಹೋಟೆಲ್‌ನಲ್ಲಿ ಕೆಲಸ ಮಾಡುವವರು 'ಅಣ್ಣಾಚಿ' (ಹಿರಿಯಣ್ಣ) ಎಂದು ಕೊಂಡಾಡುತ್ತಿದ್ದರು.

## ಹಬ್ಬಿತು ಬಿಳಲು

ಚೆನ್ನೈ ಸೆರಗಿನಲ್ಲಿರುವ ವಡಪಳನಿಯ ಮುರುಗ ರಾಜಗೋಪಾಲ್‌ರ ಆರಾಧ್ಯದೈವ. ಈ ದೇಗುಲದ ಅಭಿವೃದ್ಧಿಗೂ ರಾಜಗೋಪಾಲ್‌ರ ಉದ್ಯಮ ವಿಸ್ತಾರಕ್ಕೂ ನಂಟಿದೆ. ಒಂದಾನೊಂದು ಕಾಲದ ಸಣ್ಣ ದೇಗುಲ ಇಂದು ಅಗಾಧವಾಗಿ ಬೆಳೆದಿದೆ. ಅಲ್ಲಿರುವ ಜನರು ಇದು 'ಉದ್ಯಮಿಯೊಬ್ಬರ ಕೊಡುಗೈ ದಾನದ ಫಲ' ಎಂದು ಹೇಳುತ್ತಾರೆ. ರಾಜಗೋಪಾಲ್‌ಗೆ ಈ ಶಕ್ತಿ ತುಂಬಿದ್ದು ಪ್ರತಿದಿನ ಅವರ ಹೋಟೆಲ್‌ಗಳಲ್ಲಿ ತಿಂಡಿ ತಿನ್ನುವ, ಊಟ ಮಾಡುವ ಲಕ್ಷಾಂತರ (ಸು 1.5 ಲಕ್ಷ) ಗ್ರಾಹಕರು. ಚೆನ್ನೈನಲ್ಲಿ 19, ಕಾಂಚೀಪುರಂನಲ್ಲಿ 2, ವೆಲ್ಲೂರಿನಲ್ಲಿ ಒಂದು, ದೆಹಲಿಯಲ್ಲಿ ಮೂರು ಸೇರಿದಂತೆ ವಿಶ್ವದೆಲ್ಲೆಡೆ ಒಟ್ಟು 48 ಹೋಟೆಲ್‌ಗಳನ್ನು ಶರವಣ ಭವನ ನಡೆಸುತ್ತಿದೆ. ಅಮೆರಿಕ, ಬ್ರಿಟನ್, ಕೆನಡಾ, ಮಲೇಷಿಯಾ, ಸಿಂಗಪುರ, ದುಬೈ ಮತ್ತು ಒಮಾನ್‌ಗಳಲ್ಲಿ ಶರವಣ ಭವನದ ಒಟ್ಟು 23 ವಿದೇಶಿ ಶಾಖೆಗಳಿವೆ. ಆದಾಯದ ಮಾಹಿತಿ ಸುಲಭಕ್ಕೆ ಸಿಗುವುದಿಲ್ಲ. ದಿನಕ್ಕೆ ₹1 ಕೋಟಿ ವಹಿವಾಟು ಇರಬಹುದು ಎಂದು 'ಔಟ್‌ಲುಕ್' ವಾರಪತ್ರಿಕೆ 2009ರಲ್ಲಿ ಪ್ರಕಟಿಸಿದ ಲೇಖನದಲ್ಲಿ ಹೇಳಿತ್ತು. ಚೆನ್ನೈನ ಕೆ.ಕೆ.ನಗರದ ಶರವಣ ಭವನದಲ್ಲಿ ತಿನ್ನುವ ಇಡ್ಲಿಗೂ, ಕ್ಯಾಲಿಫೋರ್ನಿಯಾದ ಶರಣ ಭವನ ಶಾಖೆಯಲ್ಲಿ ತಿನ್ನುವ ಇಡ್ಲಿಗೂ ರುಚಿಯಲ್ಲಿ ಇಷ್ಟಾದರೂ ವ್ಯತ್ಯಾಸವಿರಲು ಸಾಧ್ಯವೇ ಇಲ್ಲ ಎನ್ನುವಂತೆ ರುಚಿ ಕಾಪಾಡಲು ಗಮನ ನೀಡುವುದು ವಿಶೇಷ.

## ಇಳಿಗಾಲ

ಅತ್ಯಾಸೆ ಮತ್ತು ಮತ್ತೊಬ್ಬರ ಹೆಂಡತಿಯ ಮೇಲೆ ಕಣ್ಣುಹಾಕುವ ಪ್ರವೃತ್ತಿ ರಾಜಗೋಪಾಲ್ ವ್ಯಕ್ತಿತ್ವಕ್ಕೆ ಅಂಟಿದ ಕಳಂಕ. ತನ್ನ ಕೈಕೆಳಗಿನ ನೌಕರನ ಪತ್ನಿಯಾಗಿದ್ದ ಕೃತ್ತಿಕಾಳನ್ನು ಎರಡನೇ ಮದುವೆ ಮಾಡಿಕೊಂಡ ರಾಜಗೋಪಾಲ್, ಮತ್ತೊಬ್ಬ ನೌಕರ ರಾಮಸ್ವಾಮಿಯ ಮಗಳು ಜೀವಜ್ಯೋತಿಯ ಮೇಲೆ ಕಣ್ಣು ಹಾಕಿದ್ದ. 'ನಿನ್ನ ಸಂಸ್ಥೆಯಲ್ಲಿ ಕೆಲಸ ಮಾಡುವ ನೌಕರನ ಮಗಳನ್ನು ಮದುವೆಯಾದರೆ ಊಹಿಸದಷ್ಟು ಸಂಪತ್ತು ನಿನ್ನದಾಗುತ್ತೆ' ಎಂದ ಜ್ಯೋತಿಷಿಯ ಮಾತು ದುಸ್ಸಾಹಸಕ್ಕೆ ಒಂದು ನೆಪವಾಯಿತು.

ಆ ಹೊತ್ತಿಗಾಗಲೇ ಜೀವಜ್ಯೋತಿ ತನ್ನ ಅಣ್ಣನಿಗೆ ಗಣಿತ ಪಾಠ ಮಾಡುತ್ತಿದ್ದ ಪ್ರಿನ್ಸ್ ಶಾಂತಕುಮಾರ್‌ನ ಪ್ರೇಯಸಿಯಾಗಿದ್ದಳು. ಈ ಶಾಂತಕುಮಾರ್ ಸಹ ರಾಜಗೋಪಾಲ್‌ನ ನೌಕರನೇ ಆಗಿದ್ದ. ತನ್ನನ್ನು ಮದುವೆಯಾಗುವಂತೆ ಜೀವಜ್ಯೋತಿಯನ್ನು ರಾಜಗೋಪಾಲ್ ಪೀಡಿಸಲು ಆರಂಭಿಸಿದ. ಒತ್ತಡದ ಪ್ರಸ್ತಾವಗಳನ್ನು ನಿರಾಕರಿಸಿದ ಜೀವಜ್ಯೋತಿ ತಾನು ಇಷ್ಟಪಟ್ಟಿದ್ದ ಹುಡುಗನನ್ನೇ ಮದುವೆಯಾದಳು. ರಾಜಗೋಪಾಲ್‌ರ ಆಸೆ, ಸಿಟ್ಟು ಕಡಿಮೆಯಾಗಿ ಎಲ್ಲವೂ ಒಂದು ಹಂತಕ್ಕೆ ಬಂತು ಎಂದುಕೊಳ್ಳುವ ಹೊತ್ತಿಗೆ ಜೀವಜ್ಯೋತಿಯ ತಾಯಿ ರಾಜಗೋಪಾಲ್‌ನನ್ನು ಭೇಟಿಯಾಗಿ ಸಹಾಯ ಯಾಚಿಸಿದ್ದಳು. ಟ್ರಾವೆಲ್ ಏಜೆನ್ಸಿ ಆರಂಭಿಸಲು ಮಗಳು–ಅಳಿಯ ಮಾಡುತ್ತಿರುವ ಬ್ಯಾಂಕ್ ಸಾಲಕ್ಕೆ ಜಾಮೀನು ನೀಡಬೇಕು ಎನ್ನುವುದು ಆಕೆಯ ಕೋರಿಕೆಯಾಗಿತ್ತು. ಈ ಪ್ರಸಂಗದ ನಂತರ ರಾಜಗೋಪಾಲ್ ಮನಸ್ಸಿನಲ್ಲಿ ಮತ್ತೆ ಜೀವಜ್ಯೋತಿ ನಿಂತುಬಿಟ್ಟಳು.

'ಗಂಡನಿಗೆ ಡೈವೋರ್ಸ್ ಕೊಟ್ಟು ನನ್ನನ್ನು ಮದುವೆಯಾಗು' ಎಂದು ಪೀಡಿಸುತ್ತಿದ್ದ. ತನ್ನ ಎಂಟು ಬಾಡಿಗೆ ಬಂಟರನ್ನು ಕಳಿಸಿ 2001ರ ಅಕ್ಟೋಬರ್‌ನಲ್ಲಿ ಕಳಿಸಿ ಜೀವಜ್ಯೋತಿಯ ಗಂಡ ಶಾಂತಕುಮಾರರನ್ನು ಅಪಹರಿಸಿ, ಕೊಲ್ಲಿಸಿದ. ಕೊಳೆತ ಸ್ಥಿತಿಯಲ್ಲಿದ್ದ ದೇಹ ಕೊಡೈಕೆನಾಲ್‌ನಲ್ಲಿ ಪತ್ತೆಯಾಗಿತ್ತು. ರಾಜಗೋಪಾಲ್ ಮತ್ತು ಅವನ ಬಂಟರು ನವೆಂಬರ್‌ನಲ್ಲಿ ಪೊಲೀಸರಿಗೆ ಶರಣಾದರು. ಜುಲೈ 2003ರಲ್ಲಿ ಜಾಮೀನು ಪಡೆದು ಹೊರಬಂದ ರಾಜಗೋಪಾಲ್ ನಾಗಪಟ್ಟಿಣಂ ಜಿಲ್ಲೆಯ ವೇದಾರಣ್ಯಂನಲ್ಲಿದ್ದ ಜೀವಜ್ಯೋತಿಯನ್ನು ಭೇಟಿಯಾಗಿ 'ನನ್ನನ್ನು ಮದುವೆಯಾದರೆ ₹6 ಲಕ್ಷ ನಗದು ಮತ್ತು ಸಾಕಷ್ಟು ಚಿನ್ನಾಭರಣ ಸಿಗುತ್ತೆ' ಎಂದು ಆಮಿಷವೊಡ್ಡಿದ. ಆಕೆ ನಿರಾಕರಿಸಿದಾಗ ಅಪಹರಿಸುವ ಬೆದರಿಕೆ ಹಾಕಿದ. ಪೊಲೀಸರು ಮತ್ತೆ ಆತನನ್ನು ಬಂಧಿಸಿದರು. ಏಪ್ರಿಲ್ 2004ರಲ್ಲಿ ಪೂನಮಲ್ಲೀ ಸೆಷನ್ಸ್ ನ್ಯಾಯಾಲಯವು ರಾಜಗೋಪಾಲ್‌ಗೆ 10 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿತು. ಹೈಕೋರ್ಟ್ ವಿಧಿಸಿದ್ದ ದಂಡನೆಯನ್ನು ಸುಪ್ರೀಂಕೋರ್ಟ್ ಎತ್ತಿಹಿಡಿಯುವುದರಿಂದ ಸುದೀರ್ಘ ಕಾನೂನು ಹೋರಾಟ ಅಂತ್ಯಗೊಂಡಿದೆ.

ಅಂದಹಾಗೆ, ಶರವಣ ಭವನದ ಎಂಟು ಅಂತರರಾಷ್ಟ್ರೀಯ ಶಾಖೆಗಳು ಶೀಘ್ರ ಆರಂಭವಾಗಲಿವೆ. ■